**<u>ಸಾಕ್ಷಿಯನ್ನು ದಿನಾಂಕಃ 03-07-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

<u>ಪಾಟೀಸವಾಲುಃ **2** ನೇ ಪ್ರತಿವಾದಿ ಪರ ಶ್ರೀ. ಕೆ.ಪಿ. ವಕೀಲರವರಿಂದಃ</u>

ನಾನು ಹಾಜರು ಪಡಿಸಿರುವ 2016 ನೇ ಸಾಲಿನ ವರೆಗಿನ ಕೈಬರಹದ ಪಹಣಿಗಳು ಮಲ್ಲಪ್ಪ ತಂದೆ ಹನುಮಪ್ಪ ಮತ್ತು ಆತನ ಪತ್ನಿ ಮರಿಯಮ್ಮನ ಹೆಸರಿನಲ್ಲಿವೆ ಅಂದರೆ ಸರಿ. ಸದರಿ ಮರಿಯಮ್ಮ ಈ ಪ್ರಕರಣದಲ್ಲಿ ಮೂಲತಃ 1 ನೆ ಪ್ರತಿವಾದಿಯಾಗಿದ್ದು ಈಗ ಮೃತ ಪಟ್ಟಿರುವರು ಅಂದರೆ ಸರಿ. 2017-18 ಸಾಲಿನಲ್ಲಿ ತನ್ನ ಗಂಡನಾದ ಜುಟ್ಲಾ ಮಲ್ಲಪ್ಪ ಮೃತ ಪಟ್ಟ ನಂತರ ಪೌತಿ ವಾರಸು ನೆಲೆಯಲ್ಲಿ 1 ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡಿರುವಳು ಅಂದರೆ ಸರಿ. ದಾವಾ ಜಮೀನು ಮೂಲತಃ ಜುಟ್ಲಾ ಮಲ್ಲಪ್ಪನಿಗೆ ಸೇರಿದ್ದಾಗಿತ್ತು. ದಾವಾ ಜಮೀನು ಮೂಲತಃ ನಾಗವ್ವ ಗಂಡ ನಾಗಪ್ಪ ಇವರಿಗೆ ಸೇರಿದ ಜಮೀನು ಅಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹಾಗೂ ಆಕೆಯ ಗಂಡ ಜುಟ್ಲಾ ಮಲ್ಲಪ್ಪ ದಿನಾಂಕ 25.06.1974 ರಂದು ನೊಂದಣಿ ಕ್ರಯ ಪತ್ರದ ಮೂಲಕ ನಾಗವ್ವ ಗಂಡ ನಾಗಪ್ಪ ಇವರಿಂದ ಖರೀದಿ ಮಾಡಿರುವರು ಅಂದರೆ ಸರಿ. ಖರೀದಿ ಮಾಡಿದಾಗಿನಿಂದ ಅವರೇ ಅದರ ಹಕ್ಕು ಅನುಭವ ಸ್ವಾಧೀನದಲ್ಲಿದ್ದು ಸಾಗುವಳಿ ಮಾಡುತ್ತಿದ್ದರು ಅಂದರೆ ಸರಿ. ದಿನಾಂಕ 13.05.1981 ರಂದು ವಿರುಪಾಕ್ಷಪ್ಪ ತಂದೆ ಸಣ್ಣ ನಿಂಗಪ್ಪ ಈತನು ಜುಟ್ಲಾ ಮಲ್ಲಪ್ಪನಿಂದ ಸರ್ವೆ 435 ಎ ರಲ್ಲಿ 2 ಎಕರೆ 13 ಸೆನ್ಸ ವಿಸ್ತೀರ್ಣದ ಜಮೀನನ್ನು ವಿಲ್ಲ ಬರೆಸಿಕೊಂಡನು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆ ವಿಲ್ಲನ್ನು ವಿರುಪಾಕ್ಷನ ಹೆಸರಿಗೆ ಬರೆಯಲು ಜುಟ್ಲಾ ಮಲ್ಲಪ್ಪನಿಗೆ ಯಾವುದೇ ಹಕ್ಕು ಅಧಿಕಾರ ಇರಲಿಲ್ಲ ಅಂದರೆ ಸರಿಯಲ್ಲ. ವಿರುಪಾಕ್ಷಪ್ಪನು ಕಾನೂನು ಬಾಹೀರವಾಗಿ ತನ್ನ ಹೆಸರಿಗೆ ವಿಲ್ಲನ್ನು ಬರೆಸಿಕೊಂಡು ವಿಲ್ಲನ್ನು ಸೃಷ್ಟಿಸಿರುವನು ಅಂದರೆ ಸರಿಯಲ್ಲ. ಜುಟ್ಲಾ ಮಲ್ಲಪ್ಪನಿಗೆ ಬಹಳಾ ವಯಸ್ಸಾಗಿತ್ತು ಮತ್ತು ಅವರಿಗೆ ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲಿ ಮತ್ತು ಕಿವಿ ಸರಿಯಾಗಿ ಕೇಳುತ್ತಿರಲಿಲ್ಲ ಅಂದರೆ ಸರಿಯಲ್ಲ. ಜುಟ್ಲಾ ಮತ್ತು ಮಲ್ಲಪ್ಪ ಮತ್ತು ಆತನ ಪತ್ನಿ ಮೃತ 1 ನೇ ಪ್ರತಿವಾದಿ ಜಂಟಿಯಾಗಿ ದಾವಾ ಅಸ್ತಿಯನ್ನು ಖರೀದಿ ಮಾಡಿದ್ದರು ಅಂದರೆ ಸರಿ. ಜುಟ್ಲಾ ಮಲ್ಲಪ್ಪನ ವಾರಸುದಾರಳಾಗಿ 1 ನೇ ಪ್ರತಿವಾದಿಯ ಹೆಸರು ಆತನ ಮರಣಾ ನಂತರ ಪಹಣಿಯಲ್ಲಿ ದಾಖಲಾಗಿರುವುದು ಅಂದರೆ ಸರಿಯಲ್ಲ. ವಿರೂಪಕ್ಷಪ್ಪನ ಹೆಸರಿನಲ್ಲಿ ಇರುವ ವಿಲ್ಲಿಗೆ ಯಾವುದೇ ಕಾನೂನಿನ ಮಾನ್ಯತೆ ಇರುವುದಿಲ್ಲ ಅಂದರೆ ಸರಿಯಲ್ಲ. ದಿನಾಂಕ 01.08.2015 ರಂದು ಮೃತ 1 ನೇ ಪ್ರತಿವಾದಿ ಉಪನೊಂದಣಿ ಕಚೇರಿಯಲ್ಲಿ ಸದರಿ ವಿಲ್ಲನ್ನು ರದ್ದು ಪಡಿಸಿರುವಳು ಅಂದರೆ ಸರಿಯಲ್ಲ. ಸದರಿ ವಿಲ್ಲಿನ ಆಧಾರ ಮೇಲೆ ವಿರುಪಾಕ್ಷಪನು ತನ್ನ ಹೆಸರಿಗೆ ಪಹಣಿ ಮಾಡಿಕ್ಕೊಳ್ಳಲು ಯಾವುದೇ ಪ್ರಯತ್ನ ನಡೆಸಿರುವುದಿಲ್ಲ ಅಂದರೆ ಸರಿಯಲ್ಲ. ದಿನಾಂಕ 30.05.2016 ರ ಆದೇಶದಂತೆ ಪಹಣ ವಿವಾದ ಸಂಖ್ಯೆ 240/15-16 ರಲ್ಲಿ ತಹಶಿಲ್ದಾರ ಇವರು ಜುಟ್ಲಾ ಮಲ್ಲಪ್ಪನ ಹೆಸರನ್ನು ತೆಗೆದು 1 ನೇ ಪ್ರತಿವಾದಿಯ ಹೆಸರನ್ನು ಸೇರ್ಪಡೆ ಮಾಡಲು ಆದೇಶ ಮಾಡಿರುವರು

ಅಂದರೆ ಸರಿ, ರಾಜಕೀಯ ಪ್ರಭಾವ ಬೆಳೆಸಿ ಮಾಡಿಸಿರುವರು. ಸದರಿ ಪ್ರಕರಣದಲ್ಲಿ ನಾನು ನನ್ನ ತಕರಾರನ್ನು ಸಲ್ಲಿಸಿದ್ದೆನು ಅಂದರೆ ಸರಿ. ನನ್ನ ತಕರಾರನ್ನು ಮತ್ತು ಮೃತ 1 ನೇ ಪ್ರತಿವಾದಿಯ ಅರ್ಜಿಯನ್ನು ಸರಿಯಾಗಿ ಪರಿಗಣಿಸಿ ಕಾನೂನಾತ್ಮಕವಾಗಿ ತಹಶಿಲ್ದಾರರು ಅದೇಶ ಮಾಡಿರುವರು ಅಂದರೆ ಸರಿಯಲ್ಲ. ಸದರಿ ಅದೇಶದ ವಿರುದ್ಧ ನಾನು ಉಪ ವಿಭಾಧಿಕಾರ ಇವರ ನ್ಯಾಯಾಲಯದಲ್ಲ್ ಅರ ಎ ನಂ 114/2016-17 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದೆವು ಅಂದರೆ ಸರಿ. ಸದರಿ ಅಪೀಲಿನಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಕೇಸು ಇರುವ ಕಾರಣ ನ್ಯಾಯಾಲಯದ ಅದೇಶದಂತ ನಡೆದುಕೊಳ್ಳಲು ಸೂಚಿಸಿ ವಿಲೇ ಮಾಡಲಾಗಿದೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಿನಾಂಕ 01.08.2016 ರಂದು ದಾಖಲೆ ಸಂಖ್ಯೆ 2473/16-17 ರ ಪ್ರಕಾರ ಮೃತ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ನೊಂದಾಯಿತ ಕ್ರಯ ಪತ್ರದ ಮುಖಾಂತರ ದಾವಾ ಜಮೀನನ್ನು ಮಾರಾಟ ಮಾಡಿರುವರು ಅಂದರೆ ಸರಿ. ಸದರಿ ಕ್ರಯ ಪತ್ರದ ಅದಾರದ ಮೇಲೆ 2 ನೇ ಪ್ರತಿವಾದಿಯ ಹೆಸರಿಗೆ ಮುಟೇಶನ್ ಮಾಡದಂತೆ ನಾನು ತಕರಾರನ್ನು ಸಲ್ಲಸಿದ್ದೆನು ಅಂದರೆ ಸರಿ. ತಹಶಿಲ್ದಾರರು ವಿಚಾರಣೆ ಮಾಡಿ ನೊಂದಾಯಿತ ಖರೀದಿ ಪತ್ರದ ಅದಾರದ ಮೇಲೆ 2 ನೇ ಪ್ರತಿವಾದಿಯ ಹೆಸರಿಗೆ ಪಹಣಿ ದಾಖಲು ಮಾಡಲು ಆದೇಶ ಮಾಡಿರುವರು ಅಂದರೆ ಸರಿ. ಆ ಪ್ರಕಾರ ಪಹಣಿಯಲ್ಲಿ ಎಂಅರ್ ನಂ 47/2016-17 ರಂತೆ 2 ನೇ ಪ್ರತಿವಾದಿಯ ಹೆಸರು ದಾಖಲಾಗಿರುತ್ತದೆ ಅಂದರೆ ಸರಿಯಲ್ಲ. ಆ ಪ್ರಕಾರ 2 ನೇ ಪ್ರತಿವಾದಿ ದಾವಾ ಜಮೀನಿನ ಹಕ್ಕು ಅಧಿಕಾರ ಸ್ವಾಧೀನಲ್ಲಿ ಇರುವರು ಅಂದರೆ ಸರಿಯಲ್ಲ. ಈಗಲೂ ಆಕೆಯೇ ದಾವಾ ಅಸ್ತಿಯನ್ನು ಸಾಗುವಳಿ ಮಾಡುತ್ತಿರುವರು ಅಂದರೆ ಸರಿಯಲ್ಲ. ನನಗೆ ದಾವಾ ಜಮೀನಿನಲ್ಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಅಂದರೆ ಸರಿಯಲ್ಲ. ವಾದ ಪತ್ರದಲ್ಲಿ ಕೇಳಿರುವ ಯಾವುದೇ ಪರಿಹಾರವನ್ನು ಪಡೆಯಲು ನಾನು ಅರ್ಹನಿರುವುದಿಲ್ಲ ಅಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಾವಾ ಜಮೀನಿನ ಕಾನೂನು ಬದ್ದ ಖರೀದಿದಾರಳು ಆಗಿರುವ ಕಾರಣ ಆಕೆಯೇ ಅದರ ಸಂಪೂರ್ಣ ಮಾಲೀಕರು ಅಂದರೆ ಸರಿಯಲ್ಲ. ಪ್ರತಿವಾದಿಳಿಗೆ ಕಿರುಕುಳ ಕೊಡಲು ಈ ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

03-07-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**